<u>ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳು ನ್ಯಾಯಾಲಯ, ಬನಹಟ್ಟಿ</u>

<u>ಸಿ.ಸಿ.ನಂ.**1877/2025**</u>

1) ಚಿನ್ನಪ್ಪ ತಂ: ಮುರಿಗೆಪ್ಪಾ ಕುಂಬಾರ,
ಸಾ: ಹೊಸೂರ, ತಾ: ರಬಕವಿ-ಬನಹಟ್ಟಿ

.....ಫಿರ್ಯಾದಿದಾರ

– ವಿರುದ್ಧ –

1) ಅನಂತರಾಜು ತಂ: ರುದ್ರಪ್ಪ ಮುಧೋಳ,
ಸಾ: ಹುನ್ನೂರ, ತಾ: ಜಮಖಂಡಿ

......ಆರೋಪಿ

<u>**– ಆಪಾದನೆ –**</u>

ನಾನು ಶ್ರೀಮತಿ ಸೌಮ್ಯ ಹೂಲಿ. ಬಿ.ಎ., ಎಲ್.ಎಲ್.ಬಿ., ದಿವಾಣಿ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ. ದಂಡಾಧಿಕಾರಿಗಳು ಬನಹಟ್ಟಿ , ತಾ:ರಬಕವಿ-ಬನಹಟ್ಟಿ ಹೊರೆಸುವ ಆಪಾದನೆ ಏನೆಂದರೆ,

ಆರೋಪಿತರಾದ ನೀವು ಪಿರ್ಯಾದುದಾರರಿಗೆ ಕಾನೂನುಬದ್ಧವಾಗಿ ಕೊಡಬೇಕಾಗಿದ್ದ ರೂ.9,00,000/- ಗಳ ಪಾವತಿಗಾಗಿ ನಿಮ್ಮ ಖಾತೆ ಇರುವ ಸ್ಟೇಟ್ ಬ್ಯಾಂಕ ಆಫ್ ಇಂಡಿಯಾ, ಶಾಖೆ ಬನಹಟ್ಟಿ ಬ್ಯಾಂಕಿನ ಚೆಕ್ ನಂ.873222 ನ್ನು ರೂ.9,00,000/- ಗಳಿಗೆ 06.10.2025 ರ ದಿನಾಂಕ ನಮೂದಿಸಿ ಫಿರ್ಯಾದಿದಾರರಿಗೆ ನೀಡಿದ್ದು, ಅವರು ಅದನ್ನು ತಮ್ಮ ಬ್ಯಾಂಕಿನ ಮೂಲಕ ನಗದೀಕರಿಸಲು ಹಾಕಿದಾಗ ನಿಮ್ಮ ಬ್ಯಾಂಕಿನವರು **"Funds Insufficient"** ಎನ್ನುವ ಹಿಂಬರಹದೊಂದಿಗೆ ಸದರಿ ಚೆಕ್ಕು ನಗದೀಕರಣವಾಗದೇ ವಾಪಸ್ಸು ಬಂದಿದ್ದು, ಆ ಬಗ್ಗೆ ಫಿರ್ಯಾದಿದಾರರು ತಮ್ಮ ವಕೀಲರ ಮೂಲಕ ದಿನಾಂಕ 09.10.2025 ರಂದು ನಿಮಗೆ ಲೀಗಲ್ ನೋಟೀಸ್ ನೀಡಿದ್ದು, ಸದರಿ ನೋಟೀಸನ್ನು ನೀವು ದಿನಾಂಕ: 10.10.2025 ರಂದು ಸ್ವೀಕರಿಸಿದ್ದು, ನಂತರ 15 ದಿನಗಳು ಕಳೆದರೂ ಸಹ ನೀವು ಚೆಕ್ಕಿನಲ್ಲಿ ನಮೂದಿಸಿದ ಹಣ ಪಾವತಿಸದೇ ಲಿಖಿತ ವರ್ಗಾವಣೆಗಳ ಕಾಯ್ದೆ (N.I.Act) ಕಲಂ.138 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುವಿ ಅಂತಾ ಆಪಾದಿಸಲಾಗಿದೆ.

ಪ್ರಶ್ನೆ-1) ಈಗ ಓದಿ ಹೇಳಲಾದ ಆರೋಪಣೆ ತಿಳಿಯಿತೆ ?

ಉತ್ತರ:- ತಿಳಿಯಿತು

ಪ್ರಶ್ನೆ-2) ಸದರಿ ಆರೋಪಣೆಯನ್ನು ಒಪ್ಪಿ ಕೊಳ್ಳುವಿರೋ ಅಥವಾ ವಿಚಾರಣೆ ಆಗಪಲು ಬಯಸುವಿರೊ ?

ಉತ್ತರ:- ವಿಚಾರಣೆ ಆಗಬೇಕು

ಮೇಲೆ ಹೇಳಲಾದ ಆರೋಪಣೆಯನ್ನು ಆರೋಪಿತನಿಗೆ ತಿಳಿಯುವ ಭಾಷೆಯಲ್ಲಿ ಓದಿ ಹೇಳಿದ ನಂತರ ಅವರು ನೀಡಿದ ಉತ್ತರವನ್ನು ಅವರ ಭಾಷೆಯಲ್ಲಿ ಬರೆದುಕೊಳ್ಳಲಾಯಿತು ಎಂದು ದೃಢೀಕರಿಸಲಾಗಿದೆ.

Sd/-
ಪ್ರ.ದ.ನ್ಯಾ. ದಂಡಾಧಿಕಾರಿಗಳು,
ಬನಹಟ್ಟಿ

ಸ್ಥಳ : ಬನಹಟ್ಟಿ
ದಿನಾಂಕ : 06.03.2026

ಆರೋಪಿಯ ಸಹಿ